# ಕ್ಯಾಮೆರಾವನ್ನು ಆಪ್ತ ಮಾಡಿಕೊಳ್ಳುವುದು ಕಲೆ

**ಶಿವಾಂಕ್**

**ಸ್ಟಾರ್ ಸುವರ್ಣ 'ಜೈ ಲಲಿತಾ' ನಾಯಕ**

■ ರಾಘವೇಂದ್ರ ಕೆ.

◆ **'ಜೈ ಲಲಿತಾ'ದ ಜೈ ಪಾತ್ರ ನಿಮಗೆ ಹೇಗೆನಿಸುತ್ತದೆ?**

ಬೇರೆ ಪ್ರಾಜೆಕ್ಟ್‌ಗೆ ಪ್ರೊಫೈಲ್ ಕೊಟ್ಟಿದ್ದೆ. ಆದರೆ ಇದಕ್ಕೆ ನನ್ನನ್ನು ಆಯ್ಕೆ ಮಾಡಿದರು. ಇದುವರೆಗೆ ಮೃದು ಸ್ವಭಾವ ಇಲ್ಲವೇ ಕಾಮಿಡಿ ಪಾತ್ರಗಳನ್ನು ಮಾಡಿದ್ದೆ. ಮೊದಲ ಬಾರಿಗೆ ರಗಡ್ ಪಾತ್ರ ಮಾಡುತ್ತಿದ್ದೇನೆ. ಆರಂಭದಲ್ಲಿ ವಿಶ್ವಾಸ ಇರಲಿಲ್ಲ. ಕಲಾವಿದನಾಗಿ ಏನಾದರೂ ಭಿನ್ನವಾಗಿ ಮಾಡಬೇಕು. ಹೊಸದಾಗಿಯೇ ಕಲಿಯಬೇಕು ಎನ್ನುವ ಮನಸಿನಿಂದಲೇ ಜಯರಾಜ್ ಚಕ್ರವರ್ತಿ ಪಾತ್ರಕ್ಕೆ ಪರಕಾಯ ಪ್ರವೇಶ ಮಾಡಿದೆ. ಇದು 'ಜೈ' ಎಂದು ಪ್ರಸಿದ್ಧಿ ಪಡೆದಿದೆ. ಜನ ಇದನ್ನು ಇಷ್ಟಪಡುತ್ತಾರೆ. ಇಂತಹದನ್ನು ಮಾಡಬೇಕು ಅನ್ನಿಸಿತು. ಪಾತ್ರಕ್ಕಾಗಿ ದೇಹವನ್ನು ಹೊಂದಿಸಬೇಕಿತ್ತು. ಅದಕ್ಕೆ ಬೇಕಾದ ಕಸರತ್ತು ಮಾಡಿದೆ. ಪ್ರತಿ ಹಂತದಲ್ಲಿಯೂ ಕಲಿತಿದ್ದೇನೆ. ತೂಕ ಏರಿಕೆ ಆಗಬೇಕಿತ್ತು. ಧ್ವನಿಯಲ್ಲಿ ಸುಧಾರಣೆ ಮಾಡಿಕೊಳ್ಳುವ ಅಗತ್ಯ ಇತ್ತು. ಒರಟನಲ್ಲದ ನಾನು ಒರಟನಂತೆ ನಟಿಸುವ ಕೆಲಸವನ್ನೂ ಮಾಡಿದೆ. ಎಂಜಾಯ್ ಮಾಡುತ್ತಿದ್ದೇನೆ. ನನಗೂ ವೀಕ್ಷಕವಲಯದಿಂದ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದೆ.

◆ **ನಿಮಗೆ ರಂಗಭೂಮಿ ನಂಟು ಬೆಳೆದದ್ದು ಹೇಗೆ?**

ಚಿತ್ರದುರ್ಗ ನಮ್ಮೂರು. ಬೆಂಗಳೂರಿಗೆ ಎಂಜಿನಿಯರಿಂಗ್ ಓದಲು ಬಂದಿದ್ದೆ. ರಂಗಭೂಮಿ ಬಗ್ಗೆ ತಿಳಿದಿರಲಿಲ್ಲ. ನಾಟಕ ಮಾಡುವುದು ಗೊತ್ತಿತ್ತು. ಅದರ ವಿಸ್ತಾರವಾದ ವ್ಯಾಪ್ತಿ ಸಿದ್ಧತೆ, ರಂಗತಂಡಗಳ ಚಟುವಟಿಕೆಗಳ ಬಗ್ಗೆ ಗೊತ್ತಿರಲಿಲ್ಲ. ಎಂಜಿನಿಯರಿಂಗ್ ಮುಗಿಸಿ ಆರು ತಿಂಗಳು ಕೆಲಸವನ್ನೂ ಮಾಡಿದೆ. ಯಾಕೋ ಕೆಲಸ ಇಷ್ಟ ಆಗಲಿಲ್ಲ. ನಟ ಆಗಬೇಕು ಎನ್ನುವ ಬಯಕೆಯಿಂದ ಆಡಿಷನ್ ಕೂಡ ನೀಡಿದೆ. ಈ ರೀತಿ ಆದರೆ ಏನೂ ಮಾಡಲು ಆಗುವುದಿಲ್ಲ. ಕಲಿಯಬೇಕು ಎಂದು ನಟನೆಯ ತರಬೇತಿಗೆ ಸೇರಿದೆ. ಮೂರು ತಿಂಗಳು ತರಬೇತಿ ಪಡೆಯುವಾಗ ರಂಗಭೂಮಿ, ನಾಟಕ, ಪಾತ್ರ, ಬಣ್ಣ ಎನ್ನುವ ಬಗ್ಗೆ ತಿಳಿಸಿದರು. ಅದು ಸಾಕಾಗುವುದಿಲ್ಲ ಎಂದು. ಅನೇಕ ಹವ್ಯಾಸಿ ರಂಗತಂಡಗಳನ್ನು ಹುಡುಕಿ ನಾಟಕಗಳಲ್ಲಿ ಅಭಿನಯಿಸಿದೆ. ಅಷ್ಟರಲ್ಲಿ ಕೋವಿಡ್ ಬಂತು. ಆ ಸಮಯವನ್ನು ಅಭಿನಯ ಕಲಿಯಲು ಬಳಸಿಕೊಂಡೆ. ಅದಾದ ಮೇಲೆ ಸೀರಿಯಲ್‌ಗೆ ಬಂದೆ.

◆ **ನಿಮಗೆ ಇಷ್ಟವಾದ ನಾಟಕ ಮತ್ತು ಪಾತ್ರದ ಬಗ್ಗೆ ಹೇಳುವುದಾದರೆ...**

ಆಂಟನ್ ಚೆಕೊವ್ ರಷ್ಯಾದ ಪ್ರಭಾವಿ ಲೇಖಕ. ಅವರು ಜೀವನವನ್ನು ಆಳವಾಗಿ ಶೋಧಿಸುವ ನಾಟಕ ರಚಿಸಿದ್ದಾರೆ. ಅವರ 'ಬೆಳ್ಳಕ್ಕಿ' (ಮೂಲ: ದಿ ಸೀಗಲ್) ದುರಂತ ನಾಟಕ, ಅದರಲ್ಲಿ ನಾಯಕನ ಪಾತ್ರ ಮಾಡಿದ್ದೆ. ಆ ಪಾತ್ರಕ್ಕೆ ಸಿದ್ಧತೆ ಕೂಡ ಚೆನ್ನಾಗಿ ಮಾಡಿಕೊಂಡಿದ್ದೆ. ತುಂಬ ಕಾಡಿತು. ಮಾನಸಿಕ ಸ್ಥಿಮಿತತೆ ಇಲ್ಲದ ಕಾಮಿಡಿ ಪಾತ್ರ. ಅಷ್ಟು ಆಳಕ್ಕೆ ಇಳಿದು ಆವಿಷ್ಕರಿಸುವಂತಹ ಸವಾಲಿನ ಪಾತ್ರ ಇನ್ನೂ ಸಿಕ್ಕಿಲ್ಲ.



◆ **ಸಿನಿಮಾ ಜಗತ್ತಿನ ಬಗ್ಗೆ ನಿಮ್ಮ ಕನಸುಗಳೇನು?**

ಸಿನಿಮಾ ಮಾಡುವ ಕನಸನ್ನು ಹೊತ್ತು ಬಂದಿದ್ದೇನೆ. ಆ ಕ್ಷೇತ್ರ ಸದ್ಯ ತುಂಬ ಸಂಕೀರ್ಣವಾಗಿದೆ. ಸೀರಿಯಲ್ ಮಾಡಿದರೆ ಸಿನಿಮಾದಲ್ಲಿ ಆಯ್ಕೆ ಆಗಲ್ಲ ಎಂದು ಕೆಲವರು ಹೇಳುತ್ತಾರೆ. ನಾನು ಅದೆಲ್ಲ ನಂಬಲ್ಲ. ಸೀರಿಯಲ್‌ನಿಂದ ಆರಂಭಿಸಿ ಪ್ಯಾನ್ ಇಂಡಿಯನ್ ಆದವರೂ ಇದ್ದಾರೆ. ಸ್ಟಾರ್ ಮಕ್ಕಳು ಹಿಟ್ ಆಗುತ್ತಾರೆ ಎನ್ನುವ ಯಾವ ಖಾತರಿಯೂ ಇಲ್ಲ. ನನಗೆ ಅಭಿನಯ ಜಗತ್ತೇ ಹೊಸತು. ಇಲ್ಲಿ ಪರಿಚಯದವರು ಯಾರೂ ಇಲ್ಲ. ಪ್ರತಿಭೆಯನ್ನು ವೀಕ್ಷಕರು ಮೆಚ್ಚಬೇಕು. ಅವರಿಗೆ ತಲುಪಲು ನಿರಂತರ ಕೆಲಸವನ್ನು ಮಾಡಬೇಕಾಗುತ್ತದೆ. ಖಾಲಿ ಕೂರಬಾರದು. ನಾಟಕ–ಸೀರಿಯಲ್ ನಟನೆ ಹೇಗೆ ಭಿನ್ನವೋ ಅಂತೆಯೆ ಸಿನಿಮಾ ಕೂಡ ಬೇರೆ ಆಗಿರುತ್ತದೆ. ಕ್ಯಾಮೆರಾವನ್ನು ಆಪ್ತ ಮಾಡಿಕೊಳ್ಳುವ ಕಲೆಯನ್ನೂ ರೂಢಿಸಿಕೊಳ್ಳಬೇಕು. ಲೆನ್ಸ್ ಆ್ಯಂಗಲ್ ಹೇಗೆಲ್ಲ ನಿಭಾಯಿಸಬೇಕು ಎಂದು ಕಲಿಯುವುದು ಇದೆ. ಒಬ್ಬ ಅನುಭವಿ ನಟನಿಗೆ ಎಲ್ಲಿ ಹೇಗೆ ಹೊಂದಿಕೊಳ್ಳಬೇಕು ಎನ್ನುವುದು ಗೊತ್ತಿರುತ್ತದೆ. ಅವನು ಎಲ್ಲ ರಂಗದಲ್ಲಿಯೂ ಕಲಿತಿರುತ್ತಾನೆ. ಅನುಭವ ಇಲ್ಲದಿದ್ದರೆ ಒಂದೇ ಕಡೆ ಇರಬೇಕಾಗುತ್ತದೆ ಎನ್ನುವುದು ನನ್ನ ಅನುಭವ. ಕೆಲವೊಂದು ಸಿನಿಮಾಗಳಿಗೆ ಅವಕಾಶ ಬಂದಿವೆ. ಕಥೆ ಇಷ್ಟ ಆಗಿಲ್ಲ ಹಾಗಾಗಿ ಒಪ್ಪಿಲ್ಲ. ಮಾಡಬೇಕು ಎನ್ನುವ ಕಾರಣಕ್ಕೆ ಮಾಡುವ ಆಸೆ ಇಲ್ಲ. ಸಿನಿಮಾ ಮಾಡುವುದು ಖ್ಯಾತಿಗೆ ಅಲ್ಲ. ಏನಾದರೂ ಕಲಿಯಬೇಕು. ವೀಕ್ಷಕರಿಗೂ ಏನಾದರೂ ಕೊಡಬೇಕು. ಇದೇ ಆಗಬೇಕು ಅನ್ನುವುದಕ್ಕಿಂತ ಒಳ್ಳೆಯ ಪಾತ್ರವನ್ನು ಮಾಡಬೇಕು. ವಿಲನ್ ಆದರೂ ಸರಿ ನಾಯಕ ಆದರೂ ಸರಿ. ಕೊನೆಪಕ್ಷ ಪುಟ್ಟ ಪಾತ್ರ ಆದರೂ ಸರಿ. ಎಲ್ಲದಕ್ಕೂ ಸಿದ್ಧ. ಬಂದ ಸಿನಿಮಾ ಒಪ್ಪುವುದು ಕಷ್ಟ. ಕಥೆಗೆ ಮಹತ್ವ ನೀಡುತ್ತೇನೆ.

◆ **ಟೀವಿ ಶಕ್ತಿ ಬಗ್ಗೆ ಏನು ಹೇಳುತ್ತೀರಿ?**

ಟೀವಿಗೆ ಇರುವ ಜನಪ್ರಿಯತೆ ಬೇರೆ ಯಾವ ಮಾಧ್ಯಮಕ್ಕೂ ಇಲ್ಲ. ಸಿನಿಮಾ ಟಾಕೀಸುಗಳು ಎಷ್ಟೋ ಊರುಗಳಲ್ಲೇ ಇರಲ್ಲ. ಇದ್ದರೂ ಕೆಲವು ಕುಟುಂಬ ವರ್ಗದವರು ಹೋಗಿ ನೋಡುವಷ್ಟು ಚೆನ್ನಾಗಿ ಇರಲ್ಲ. ಟೀವಿ ಬಹುತೇಕ ಎಲ್ಲರ ಮನೆಯಲ್ಲಿ ಇರುತ್ತದೆ. ಧಾರಾವಾಹಿಗಳು ಅಂದರೆ ಅತ್ತೆ ಸೊಸೆ ಜಗಳವೇ ಇರಬಹುದು. ಆದರೂ ನಮ್ಮ ಕಲೆಯನ್ನು ತೋರಿಸಲು ಅವಕಾಶ ಇದೆ. ಇಲ್ಲಿ ತುಂಬ ಸ್ಪರ್ಧೆ ಕೂಡ ಇದೆ. ಯಾವುದನ್ನೂ ಹಗುರವಾಗಿ ತೆಗೆದುಕೊಳ್ಳಬಾರದು. ಟೀವಿಯ ಮೂಲಕ ವೀಕ್ಷಕರ ಪರಿಚಯ ಆಗುವುದು ಸುಲಭ. ತೆಲುಗು ಧಾರಾವಾಹಿಗೆ ಹೋದ ಮೇಲೆ ಲಿಪಿ ಕಲಿತು ಓದುವುದನ್ನೂ ಅಭ್ಯಾಸ ಮಾಡಿಕೊಂಡೆ. ಬೇರೆ ಬೇರೆ ಭಾಷೆ ಕಲಿಯಬೇಕು, ನಟಿಸಬೇಕು. ■